**ಕರ್ನಾಟಕ ಸರ್ಕಾರ**

**ವಾಣಿಜ್ಯ ತೆರಿಗೆ ಇಲಾಖೆ**

ವಾಣಿಜ್ಯ ತೆರಿಗೆ ಅಪರ ಆಯುಕ್ತರವರ ಕಛೇರಿ, (ಜಾರಿ), ದಕ್ಷಿಣ ವಲಯ, 3ನೇ ಮಹಡಿ,
ವಾಣಿಜ್ಯ ತೆರಿಗೆ ಕಾರ್ಯಾಲಯ–2, ಬಿ–ಬ್ಲಾಕ್, ಕೋರಮಂಗಲ, ಬೆಂಗಳೂರು–560 047.

---

NO.ADCOM/ENF/SZ/CTO- 33/MSS-01/2018-19 ದಿನಾಂಕ: 03-08-2024

**ಇಲಾಖಾ ವಶಕ್ಕೆ ಪಡೆದಿರುವ ಗಂಗಾ ಕುಕ್ಕರ್ 5 ಲೀಟರ್, ಗಂಗಾ ಕುಕ್ಕರ್ 3 ಲೀಟರ್, ಪ್ಲಾಸ್ಟಿಕ್ ಬ್ಯಾಗ್, ಗ್ಯಾಸ್ ಸ್ಟೌವ್ ಅನ್ನು ಹರಾಜು ಮಾಡಲು ಮುಚ್ಚಿದ ಲಕೋಟೆಯಲ್ಲಿ ಬಿಡ್‌ಗಳನ್ನು ಆಹ್ವಾನಿಸುವ ಬಗ್ಗೆ.**

ಕರ್ನಾಟಕ/ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ ಕಾಯ್ದೆ, 2017ರಡಿ ಇಲಾಖಾ ವಶಕ್ಕೆ ಪಡೆದಿರುವ, ಗಂಗಾ ಕುಕ್ಕರ್ 5 ಲೀಟರ್, ಗಂಗಾ ಕುಕ್ಕರ್ 3 ಲೀಟರ್, ಪ್ಲಾಸ್ಟಿಕ್ ಬ್ಯಾಗ್, ಗ್ಯಾಸ್ ಸ್ಟೌವ್ ಅನ್ನು, ಮುಚ್ಚಿದ ಲಕೋಟೆ ಪದ್ದತಿ ಅನುಸಾರ **ಯಾವ ಸ್ಥಿತಿಯಲ್ಲಿದೆಯೋ** ಅದೇ ರೀತಿ ಸಾರ್ವಜನಿಕ ಹರಾಜು ಮೂಲಕ, ಈ ಕೆಳಕಂಡ ಷರತ್ತುಗಳಿಗೊಳಪಟ್ಟು ವಿಲೇವಾರಿ ಮಾಡಲು ಅಧಿಸೂಚನೆ ಹೊರಡಿಸಿದೆ.

1. ಆಸಕ್ತ ಬಿಡ್‌ದಾರರು ಈ ಕಛೇರಿಯ ಆವರಣದಲ್ಲಿರುವ ಸರಕುಗಳನ್ನು ದಿನಾಂಕ: 10–08–2024 ರಂದು ಬೆಳಿಗ್ಗೆ 11.00 ರಿಂದ ಸಂಜೆ 5.00 ಗಂಟೆಯವರೆಗೂ ಪರಿಶೀಲಿಸಬಹುದಾಗಿರುತ್ತದೆ.
2. ಆಸಕ್ತ ಬಿಡ್‌ದಾರರು, ಗಂಗಾ ಕುಕ್ಕರ್ 5 ಲೀಟರ್, ಗಂಗಾ ಕುಕ್ಕರ್ 3 ಲೀಟರ್, ಪ್ಲಾಸ್ಟಿಕ್ ಬ್ಯಾಗ್, ಗ್ಯಾಸ್ ಸ್ಟೌವ್ ಖರೀದಿಗಾಗಿ, ಸೀಲ್ ಮಾಡಲಾದ ಕವರ್‌ಗಳಲ್ಲಿ ತಮ್ಮ ಬಿಡ್‌ಗಳನ್ನು ದಿನಾಂಕ 13–08–2024 ರ ಒಳಗಾಗಿ ಬೆಳಿಗ್ಗೆ 11.00 ರಿಂದ ಸಂಜೆ 5.00 ಗಂಟೆಯೊಳಗೆ ಸರಕುಗಳ ವಿವರಗಳನ್ನು ನಮೂದಿಸಿ ಸಲ್ಲಿಸಬಹುದಾಗಿರುತ್ತದೆ.
3. ಆಸಕ್ತ ಬಿಡ್‌ದಾರರು, ರೂ.10,000–00 (ಹತ್ತು ಸಾವಿರ ರೂಪಾಯಿಗಳು) ಠೇವಣಿ (ಇ.ಎಂ.ಡಿ) ಹಣವನ್ನು ವಾಣಿಜ್ಯ ತೆರಿಗೆ ಅಧಿಕಾರಿ (ಜಾರಿ)–33, ದಕ್ಷಿಣ ವಲಯ, ಬೆಂಗಳೂರು ಇವರ ಹೆಸರಿನಲ್ಲಿ ಗಂಗಾ ಕುಕ್ಕರ್ 5 ಲೀಟರ್, ಗಂಗಾ ಕುಕ್ಕರ್ 3 ಲೀಟರ್, ಪ್ಲಾಸ್ಟಿಕ್ ಬ್ಯಾಗ್, ಗ್ಯಾಸ್ ಸ್ಟೌವ್ ಖರೀದಿಗಾಗಿ ಎಂದು ಸಲ್ಲಿಸತಕ್ಕದ್ದು.
4. ಬಿಡ್‌ದಾರರು ಗಂಗಾ ಕುಕ್ಕರ್ 5 ಲೀಟರ್, ಗಂಗಾ ಕುಕ್ಕರ್ 3 ಲೀಟರ್, ಪ್ಲಾಸ್ಟಿಕ್ ಬ್ಯಾಗ್, ಗ್ಯಾಸ್ ಸ್ಟೌವ್‌ಗಾಗಿ ಮೂಲ ದರವನ್ನು ಸಂಖ್ಯೆ(ಪ್ರಮಾಣ) ಆಧಾರದಲ್ಲಿ ಸಲ್ಲಿಸತಕ್ಕದ್ದು.
5. ಬಿಡ್ ದರಗಳು ಚಾಲ್ತಿಯಲ್ಲಿರುವ ಮಾರುಕಟ್ಟೆ ದರದ ಆಧಾರದಲ್ಲಿರತಕ್ಕದ್ದು.
6. ಸೀಲ್ ಮಾಡಲಾದ ಬಿಡ್ ಲಕೋಟೆಗಳನ್ನು ದಿನಾಂಕ 18–08–2024 ರಂದು ಮಧ್ಯಾಹ್ನ 12.00 ಗಂಟೆಗೆ ಎಲ್ಲಾ ಬಿಡ್‌ದಾರರ ಸಮ್ಮುಖದಲ್ಲಿ ಈ ಕಛೇರಿಯಲ್ಲಿ ತೆರೆಯಲಾಗುವುದು. ಯಾವುದಾದರೂ ಬಿಡ್ ಒಪ್ಪಿಗೆಯಾದಲ್ಲಿ, ಯಶಸ್ವಿ ಬಿಡ್‌ದಾರರನ್ನು ಅದೇ ದಿನ ಘೋಷಿಸಲಾಗುವುದು.
7. ಯಶಸ್ವಿ ಬಿಡ್‌ದಾರರು ಮೂಲ ದರದ ಜೊತೆಗೆ, ಗಂಗಾ ಕುಕ್ಕರ್ 5 ಲೀಟರ್, ಗಂಗಾ ಕುಕ್ಕರ್ 3 ಲೀಟರ್, ಪ್ಲಾಸ್ಟಿಕ್ ಬ್ಯಾಗ್, ಗ್ಯಾಸ್ ಸ್ಟೌವ್ ಖರೀದಿಯ ಮೇಲೆ ಶೇಕಡ 18% ಜಿಎಸ್‌ಟಿ ಯನ್ನು ಆರ್‌ಸಿಎಂ ಅಡಿಯಲ್ಲಿ ಪಾವತಿಸತಕ್ಕದ್ದು.
8. ಒಬ್ಬರಿಗಿಂತ ಹೆಚ್ಚಿನ ಬಿಡ್‌ದಾರರು ಒಂದೇ ಮೊತ್ತದ ಗರಿಷ್ಟ ಬಿಡ್‌ನ್ನು ಘೋಷಿಸಿದಲ್ಲಿ ಅವರು ಅದೇ ದಿನ ಒಂದು ಗಂಟೆಯೊಳಗಾಗಿ ಸೀಲ್ ಮಾಡಿದ ಲಕೋಟೆಯಲ್ಲಿ ಮತ್ತೊಂದು ಬಿಡ್‌ನ್ನು ಸಲ್ಲಿಸುವುದು ಹಾಗೂ ಮೊದಲೇ ಸಲ್ಲಿಸಿದ ಬಿಡ್‌ಗಿಂತ ಕಡಿಮೆ ಮೊತ್ತ ಇರಬಾರದು.
9. ಯಶಸ್ವಿ ಬಿಡ್‌ದಾರರು ಹಣವನ್ನು ಜಿಎಸ್‌ಟಿ ಖಾತೆಗೆ ಆನ್‌ಲೈನ್ ಮುಖಾಂತರ ಪಾವತಿಸಿ, ಸರಕುಗಳನ್ನು ಏಳು ದಿನಗಳೊಳಗಾಗಿ ತೆಗೆದುಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ಸಲ್ಲಿಸಲಾದ ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
10. ಯಶಸ್ವಿ ಬಿಡ್‌ದಾರರು ಏಳು ದಿನಗಳೊಳಗಾಗಿ ಹಣವನ್ನು ಪಾವತಿಸಲು ವಿಫಲವಾದಲ್ಲಿ, ಎರಡನೇ ಬಿಡ್‌ದಾರರನ್ನು ಯಶಸ್ವಿ ಬಿಡ್‌ದಾರರೆಂದು ಪರಿಗಣಿಸಲಾಗುವುದು.

11. ಯಶಸ್ವಿ ಬಿಡ್‌ದಾರರು ಸದರಿ ಖರೀದಿಯನ್ನು ಅನೊಂದಾಯಿತ ಖರೀದಿ ಎಂದು ಪರಿಗಣಿಸತಕ್ಕದ್ದು.
12. ಯಾವುದೇ ಬಿಡ್‌ಗಳನ್ನು ಯಾವುದೇ ಕಾರಣವಿಲ್ಲದೆ ಒಪ್ಪಿಕೊಳ್ಳುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಕೆಳಗೆ ಸಹಿಮಾಡಲಾದ ಅಧಿಕಾರಿಗಳು ಹೊಂದಿರುತ್ತಾರೆ.

| Sl NO | Description of Goods | Quantity | perPrice | Total Value |
|---|---|---|---|---|
| 1 | Ganga Cooker 5 liters | 72 No's | 839 | Rs.60408/- |
| 2 | Ganga Cooker 3 liters | 144 No's | 594 | Rs.85536/- |
| 3 | Readymade Garments | 240 No's | 250 | Rs.60000/- |
| 4 | Plastic Carry Bags | 696 No's | 126 | Rs.87696/- |
| 5 | Gas Stoves | 30 No's | 2184 | Rs.65520/- |
| | Total | | | Rs. 3,59,160/- |

ಇಂತಿ ತಮ್ಮ ವಿಶ್ವಾಸಿ

ವಾಣಿಜ್ಯ ತೆರಿಗೆ ಅಧಿಕಾರಿ
(ಜಾರಿ)–33, ದಕ್ಷಿಣ ವಲಯ, ಬೆಂಗಳೂರು.

**ಪ್ರತಿಗಳನ್ನು:**

1. ಮಾನ್ಯ ವಾಣಿಜ್ಯ ತೆರಿಗೆಗಳ ಆಯುಕ್ತರು, ಕರ್ನಾಟಕ, ಗಾಂಧಿನಗರ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಗೌರವ ಪುರ್ವಕವಾಗಿ ಸಲ್ಲಿಸಲಾಗಿದೆ.
2. ಮಾನ್ಯ ವಾಣಿಜ್ಯ ತೆರಿಗೆ ಅಪರ ಆಯುಕ್ತರು (ಜಾರಿ), ದಕ್ಷಿಣ ವಲಯ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಗೌರವ ಪುರ್ವಕವಾಗಿ ಸಲ್ಲಿಸಲಾಗಿದೆ.
3. ಮಾನ್ಯ ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಲೆಕ್ಕಪರಿಶೋಧನೆ), ವಾಣಿಜ್ಯ ತೆರಿಗೆ ಆಯುಕ್ತರ ಕಛೇರಿ, ಗಾಂಧಿನಗರ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
4. ಮಾನ್ಯ ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು ಇ–ಆಡಳಿತ ವಾಣಿಜ್ಯ ತೆರಿಗೆ ಆಯುಕ್ತರ ಕಛೇರಿ, ಗಾಂಧಿನಗರ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
5. ಮಾನ್ಯ ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ), ವಿಸಸೇತೆಕ–1, 2, 3, 4, 5 & 6 ರವರಿಗೆ ಮತ್ತು ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಜಾಗೃತಿ), ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದ್ದು, ತಮ್ಮ ವಿಭಾಗದ ನೋಟೀಸ್ ಬೋರ್ಡ್‌ನಲ್ಲಿ ಸದರಿ ಹರಾಜು ನೋಟಿಸನ್ನು ಪ್ರಕಟಿಸಲು ವಿನಂತಿಸಿಕೊಳ್ಳಲಾಗಿದೆ.
6. ಇಲಾಖೆಯ ನೋಟೀಸ್‌ಬೋರ್ಡ್ www.ctax.kar.nic.in